**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.</u>**

**<u>ಸಿ.ಸಿ. ನಂ. 2156/2021</u>**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ರವಿ | ಸಿ.ಡಬ್ಲ್ಯೂ–8 |
| ತಂದೆ ಹೆಸರು | : | ದ್ಯಾಮಣ್ಣ | ಪಿ.ಡಬ್ಲ್ಯೂ–3 |
| ವಯಸ್ಸು | : | 36 ವರ್ಷ | |
| ಉದ್ಯೋಗ | : | ಹಮಾಲಿ ಕೆಲಸ | |
| ವಾಸಸ್ಥಳ | : | ಕೆಂಚವೀರನಹಳ್ಳಿ | ದಿಃ 02–04–2026. |

**<u>ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ</u>**

ಸಾಕ್ಷಿಗೆ ನಿಪಿ.2 ಮತ್ತು 4 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 2(ಸಿ) ಮತ್ತು 4(ಸಿ) ಅಂತ ಗುರುತಿಸಲಾಯಿತು. ಈಗ್ಗೆ 4 ವರ್ಷಗಳ ಹಿಂದೆ ಠಾಣೆಯಲ್ಲಿ ಅಪಘಾತದ ವಿಚಾರವಾಗಿ ನಿಪಿ.2 ಮತ್ತು 4 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು, ಚಾಸಾ–7 ಹಾಗೂ ಗ್ರಾಮಸ್ಥರು ಹಾಜರಿದ್ದವು. ಪೊಲೀಸರು ನನ್ನ ಸಮಕ್ಷಮ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ನಿಪಿ.2 ಮತ್ತು4 ಕ್ಕೆ ರಾತ್ರಿ ಸಸವಯದಲ್ಲಿ ಸಹಿ ಮಾಡಿದ್ದು ನಿಖರವಾಗಿ ಹೇಳಲು ಆಗುವುದಿಲ್ಲ. ನಿಪಿ.2 ಮತ್ತು4 ರಲ್ಲಿಏನು ಬರೆದಿದೆ ಎಂದು ನನಗ ಹೇಳಲು ಆಗುವುದಿಲ್ಲ.

ಸಾಕ್ಷಿಯು ನಿಪಿ.3 ರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ಪಾವಗಡ ರಸ್ತೆಯಲ್ಲಿ ತೆಗೆಯಲಾಗಿರುತ್ತದೆ. ನಿಪಿ.3 ಅನ್ನು ಅಪಘಾತ ಸ್ಥಳದಲ್ಲಿ ತೆಗೆಯಲಾಗಿರುತ್ತದೆ.

ಸಾಕ್ಷಿಗೆ ನಿಪಿ.5 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 5(ಸಿ) ಅಂತ ಗುರುತಿಸಲಾಯಿತು.

ಈಗ್ಗೆ 2 ವರ್ಷಗಳ ಹಿಂದೆ ಕೆಂಚವೀರನಹಳ್ಳಿಯಲ್ಲಿ ನಿಪಿ.5 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ.5 ಕ್ಕೆ ನನ್ನ ಜೊತೆ ಚಾಸಾ–8 ರವರು ಸಹಿ ಮಾಡಿರುತ್ತಾರೆ. ನಿಪಿ.5 ಕ್ಕೆ ಸಹಿ ಮಾಡಿದಾಗ ಎಷ್ಟು ಸಮಯ ಆಗಿತ್ತು ಎಂದು ಹೇಳಲು ಆಗುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 22.09.2020 ರಂದು ಡಿ ಉಪ್ಪಾರಹಟ್ಟಿ ಗೇಟಿನ ಹತ್ತಿರ ಅಪಘಾತ ಸ್ಥಳಕ್ಕೆ ನನ್ನನ್ನು ಹಾಗೂ ಚಾಸಾ-5 ರವರನ್ನು ಮಹಜರ್ ಕ್ರಮ ಜರುಗಿಸಲು ಪಂಚರಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿ. ಮಹಜರ್ ಬಗ್ಗೆ ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಸ್ಥಳ ಪಂಚನಾಮೆ ಸ್ಥಳದಲ್ಲಿ ಚಾಸಾ-1 ರವರು ಹಾಜರಿದ್ದ ಎಂದರೆ ಸರಿ. ಚಾಸಾ-1 ರವರು ಅಪಘಾತ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ. ಸದರಿ ಸ್ಥಳ ದಲ್ಲಿ ಮದ್ಯಾಹ್ನ 02-15 ರಿಂದ 03-15 ರವರೆಗೆ ನಿಪಿ.2 ರಂತೆ ಮಹಜರ್ ಕ್ರಮ ಜರುಗಿಸಿ ಸಹಿ ಪಡೆದಿರುತ್ತಾರೆ ಎಂದರೆ ಸರಿ. ನಿಪಿ.2 ಅನ್ನು ಮಹಜರ್ ಸಮಯದಲ್ಲಿ ತಯಾರಿಸಿ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಮಹಜರ್ ಸಮಯದಲ್ಲಿ ನಿಪಿ.3 ರ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿ.

ಅದೇ ದಿನ ನನ್ನನ್ನು , ಚಾಸಾ-1 ಮತ್ತು 7 ರವರನ್ನು ಠಾಣೆಗೆ ಬಂದಿರುತ್ತಾರೆ ಎಂದರೆ ಸರಿ. ಠಾಣೆಯಲ್ಲಿ ಅಪಘಾತ ಪಡಿಸಿದ ಆಟೋ ನೊಂದಣಿ ಸಂಖ್ಯೆ ಕೆಎ-17 ಡಿ-0430 ವಾಹನವನ್ನು ನಿಲ್ಲಿಸಿದ್ದು ಅದನ್ನು ಚಾಸಾ-1 ರವರು ನೋಡಿ ಗುರುತಿಸಿರುತ್ತಾರೆ ಎಂದರೆ ಸರಿ. ಸದರಿ ಆಟೋವನ್ನು ಮದ್ಯಾಹ್ನ 03-45 ರಿಂದ 04-15 ರವೆರಗೆ ನಿಪಿ.5 ರಂತೆ ಮಹಜರ್ ಕ್ರಮ ಜರುಗಿಸಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

## ಪಾಟೀ ಸವಾಲುಃ ಶ್ರೀ ಜಿ.ಆರ್ ಆರೋಪಿ ಪರ ವಕೀಲರಿಂದಃ

ನಾನು 5 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ಮಹಜರ್ ಸ್ಥಳಕ್ಕೆ ಹಾಜರಾಗಲು ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.5 ಕ್ಕೆ ಯಾವ ವಿಚಾರವಾಗಿ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅಪಘಾತದ ವಿಚಾರವಾಗಿ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.2 , 4 ಮತ್ತು 5 ಕ್ಕೆ ಯಾವ ಸಮಯದಲ್ಲಿ ಸಹಿ ಪಡಿದಿರುತ್ತಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಿಪಿ.3 ಭಾವಚಿತ್ರವನ್ನು ತೆಗೆಸಿಕೊಂಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ